# ಮಿಲನೋತ್ಸವ!

ರಾತ್ರಿ ಗೋಡೆಯ ಮೇಲೆ ಹಲ್ಲಿಯೊಂದು ಉದ್ವೇಗದಿಂದ ಅತ್ತಿತ್ತ ಠಳಾಯಿಸುತ್ತಿತ್ತು. ಬುಸುಗುಡುತ್ತಿದ್ದ ಅದು ಬಳಿಯಲ್ಲಿದ್ದ ಹಲ್ಲಿಯೊಂದರ ಮೇಲೆ ಏರಿಹೋಯಿತು. ಇದಕ್ಕೆ ಹೆದರಿ ಅದು ಗೋಡೆಯ ಮತ್ತೊಂದು ಬದಿಗೆ ಓಡಿ ಹೋಯಿತು. ಅಷ್ಟೊತ್ತಿಗೆ ಬಾಲ ಸುತ್ತಿಕೊಳ್ಳುತ್ತ ಮತ್ತೊಂದು ಹಲ್ಲಿ ಅಲ್ಲಿಗೆ ಬಂತು. ಎರಡೂ ಕುಚು ಕುಚು ಏನೋ ಮಾತಾಡಿಕೊಂಡವು. ಮುಂದೆ ಒಂದಿಷ್ಟು ಹೊತ್ತು ಕಿಸಿ ಬಿಸಿ ಮಾತಾಡಿ. ನಂತರ ಮಿಲನ ಕ್ರಿಯೆಗೆ ಮುಂದಾದವು. ಹೆಣ್ಣುಹಲ್ಲಿ ಒಂದೆರಡು ತತ್ತಿ (ಮೊಟ್ಟೆ)ಗಳನ್ನು ತನಗೆ ಸುರಕ್ಷಿತ ಅನ್ನಿಸಿದ ಸಂದುಗಳಲ್ಲಿ ಇಡುತ್ತದೆ. ನಿರುಪದ್ರವಿ ಹಲ್ಲಿಗಳು ಸೊಳ್ಳೆಗಳನ್ನು ಸೇವಿಸುವುದರಿಂದ ಮಾನವನಿಗೆ ಉಪಕಾರಿಗಳೇ ಸೈ.

—ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು





# ನೆತ್ತಿಮರದ ಅಣಬೆ

ಅಗಾರಿಕಸ್ ಸಿಲ್ವಾಟಿಕಸ್ ಎಂಬ ವೈಜ್ಞಾನಿಕ ಹೆಸರುಳ್ಳ, ನೆತ್ತಿಮರದ ಅಣಬೆ ಎಂದೇ ಗುರ್ತಿಸಲ್ಪಡುವ ಈ ಅಣಬೆಗಳು ಸೆಪ್ಟೆಂಬರ್‌ವರೆಗೂ ಸಾಮಾನ್ಯವಾಗಿ ಹೊಲಗದ್ದೆಗಳ ಬದುಗಳಲ್ಲಿ ಗುಂಪುಗುಂಪಾಗಿ ಕಂಡುಬರುತ್ತವೆ. ಬೂದು ಹಾಗೂ ಕಂದು ಮಿಶ್ರಿತ ಈ ಅಣಬೆಗಳ ಮೇಲ್ಮೈ ಸುಮಾರು 10 ಸೆಂಟಿ ಮೀಟರುಗಳಷ್ಟು ವ್ಯಾಸವನ್ನು ಹೊಂದಿರುತ್ತದೆ. ತಿನ್ನಲು ಅಷ್ಟೇನೂ ಯೋಗ್ಯವಲ್ಲದ ಇವು ಮೃದುವಾಗಿದ್ದು ಮುಟ್ಟಲು ಹಿತವೆನಿಸುತ್ತದೆ.

—ಪ.ನಾ. ಹಳ್ಳಿ ಹರೀಶ್ ಕುಮಾರ್

# ಗುಬ್ಬಚ್ಚಿ ಗೃಹ ಪ್ರವೇಶ

ಬಾಲ್ಯದಲ್ಲಿ ಗುಬ್ಬಚ್ಚಿಗಳು ಮನೆಯ ಹೆಂಚುಗಳ ಸಂದಿಗಳಲ್ಲಿ ಸ್ವಲ್ಪ ನಾರು, ಹುಲ್ಲು ತಂದು ಗೂಡು ಕಟ್ಟಿಕೊಳ್ಳುತ್ತಿದ್ದನ್ನು ನೋಡಿದ್ದೆ. ತಾರಸಿ ಮನೆಗಳ ಭರಾಟೆಯಲ್ಲಿ ಗೂಡಿಗಾಗಿ ಜಾಗ ಸಿಗದೇ ಅವು ಕಷ್ಟ ಪಡುತ್ತಿವೆ. ಅವುಗಳ ಕಷ್ಟ ಅರಿತ ರಾಯಚೂರು ಜಿಲ್ಲೆಯ ಪಕ್ಷಿ ಪ್ರೇಮಿ ಸಲ್ಲಾಲುದ್ದಿನ್ ಗುಬ್ಬಚ್ಚಿಗಳಿಗೆ ಮನೆ ನಿರ್ಮಿಸಿ ಕೊಡುತ್ತಿದ್ದಾರೆ.

ಪಿವಿಸಿ ಪೈಪ್‌ನಲ್ಲಿ ಅವರು ಮಾಡಿದ ಗೂಡನ್ನು ಗೋಡೆಗೆ ಸುಲಭವಾಗಿ ಅಳವಡಿಸಬಹುದು. ದಾವಣಗೆರೆಯ ನಮ್ಮ ಮನೆಯಲ್ಲಿ ಆ ಪ್ರಯೋಗವನ್ನು ಮಾಡಿದೆವು. ಅವರ ಸಲಹೆಯಂತೆ ಸ್ವಲ್ಪ ತೆಂಗಿನ ನಾರು ಮತ್ತು ದಾರದ ತುಂಡುಗಳನ್ನು ಪ್ರವೇಶದ್ವಾರದಲ್ಲಿ ಇಡಲಾಗಿತ್ತು. ಮರುದಿನವೇ ಜೋಡಿ ಗುಬ್ಬಿ ಹಾಜರಾಗಿ ಪರಿಶೀಲನೆ ನಡೆಸಿದ್ದವು. ಸರ್ವೇಕ್ಷಣೆ ಮುಗಿಸಿದ ದಂಪತಿಗಳು ತಮಗೆ ಬೇಡವಾದ ನಾರನ್ನು ಹೊರಹಾಕಿ ತಮಗೆ ಬೇಕಾದಂತೆ ಒಳಾಂಗಣ ಸಿದ್ಧಪಡಿಸಿ ಸಂಕ್ರಾಂತಿಯಂದು ಗೃಹಪ್ರವೇಶ ಮಾಡಿದವು. ಗುಬ್ಬಿ ದಂಪತಿಗೆ ಸುರಕ್ಷಿತ ಮನೆ ಸಿಕ್ಕಿರುವುದು ಸಂತೋಷದ ಸಂಗತಿಯಾದರೆ ನಮಗೊಂದು ಅವಿಸ್ಮರಣೀಯ ಅನುಭೂತಿ.

—ಡಾ.ಎಸ್. ಶಿಶುಪಾಲ, ದಾವಣಗೆರೆ

